ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ಸರ್ವ ಶಿಕ್ಷಣ ಅಭಿಯಾನ

ಮಾರ್ಚ್ 2010

# ಚಿಣ್ಣರ ಚೇತನ

ಓ ನನ್ನ ಚೇತನಾ ಆಗು ನೀ ಅನಿಕೇತನ

## ಸರಸ್ವತಿ ನದಿ ಇತ್ತೆಂಬುದಕ್ಕೆ ಈಗ ಪುರಾವೆ ದೊರೆತಿವೆ




ಮಕ್ಕಳೇ, ಮಾರ್ಚ್‌ನಲ್ಲಿ ನಾವೆಲ್ಲ ಶಾಲೆಗಳಲ್ಲಿ ಸರಸ್ವತಿ ಪೂಜೆ ಮಾಡುತ್ತೇವೆ ಅಲ್ಲವೆ? ಭಾರತೀಯ ಸಂಸ್ಕೃತಿಯ ಪ್ರಕಾರ ಸರಸ್ವತಿ ವಿದ್ಯಾಭಿಮಾನಿ ದೇವತೆ; ವಿದ್ಯೆಯನ್ನು ಗಳಿಸಲು ಇಷ್ಟಪಡುವವರೆಲ್ಲ ಪೂಜಿಸುವ ದೇವತೆ.

ಸರಸ್ವತಿ ಒಂದೊಮ್ಮೆ ಮಹಾನದಿಯಾಗಿ ಹರಿದು ಉತ್ತರ ಭಾರತದ ಹಿಮಾಚಲ ಪ್ರದೇಶ, ಉತ್ತರಾಂಚಲ, ಪಂಜಾಬ್, ಹರಿಯಾಣಾ, ರಾಜಸ್ಥಾನ, ಗುಜರಾತ್‌ಗಳಲ್ಲಿ ಸಂಸ್ಕೃತಿಯ ತೊಟ್ಟಿಲೊಂದಕ್ಕೆ ಪೋಷಣೆ, ರಕ್ಷಣೆ ಒದಗಿಸಿದವಳು. ಸಿಂಧೂ ಕಣಿವೆಯ ಸಂಸ್ಕೃತಿಗಿಂತ ಪ್ರಾಚೀನವಾದ ಸರಸ್ವತಿ ನದಿ ಕಣಿವೆಯ ಸಂಸ್ಕೃತಿಯ ಸಾವಿರಾರು ಕುರುಹುಗಳು ದೊರೆತಿವೆ.

ಭಾರತೀಯ ಸಂಸ್ಕೃತಿಯ ಸಪ್ತಸಿಂಧುಗಳಲ್ಲಿ ಒಂದಾದ ಸರಸ್ವತಿ ನದಿಯ ಪಾತ್ರವನ್ನು ಭಾರತೀಯ ಬಾಹ್ಯಾಕಾಶ ಸಂಸ್ಥೆ ಉಪಗ್ರಹದ ಮುಖಾಂತರ ಗುರುತಿಸಿದೆ. ಸುಮಾರು 3 ಕಿ.ಮೀ. ಪಾತ್ರವನ್ನು ಈ ನದಿ ಹೊಂದಿತ್ತು ಹಾಗೂ ಅನೇಕ ರಾಜ್ಯಗಳಲ್ಲಿ ಜನರಿಗೆ ಆಹಾರ ಪೋಷಣೆ ಒದಗಿಸುತ್ತಿತ್ತು ಎಂಬುದು ಖಚಿತವಾಗಿದೆ.

ಆಶ್ಚರ್ಯವೆಂದರೆ ನದಿಯ ಇರುವಿಕೆಯನ್ನು ದೃಢೀಕರಿಸುವಂತಹ ಆಧಾರವಾಗಿ ರಾಜಸ್ಥಾನದ ಮರುಭೂಮಿ ಜೈಸಲ್ಮೇರದಲ್ಲಿ ಕೊಳವೆ ಬಾವಿಗಳನ್ನು ಕೊರೆದಾಗ ನೀರು ಪಂಪಿನ ಸಹಾಯವಿಲ್ಲದೆ ಹರಿಯಲಾರಂಭವಾಗಿದೆ. ಹಾಗೂ ಈ ನೀರು ಸುಮಾರು 3500 ವರ್ಷ ಹಿಂದೆ ಲುಪ್ತವಾಗಿದ್ದ ಸರಸ್ವತಿ ನದಿಯ ನೀರಿರಬಹುದೆಂದು ವಿಜ್ಞಾನಿಗಳು ಹೇಳುತ್ತಾರೆ. ಆದರೆ ಶಿಲಾಖಂಡಗಳ ಏರು ಪೇರು ಹಾಗೂ ಭೂಕಂಪದಿಂದ ನದಿ ಲುಪ್ತವಾಯಿತೆಂದು ತಿಳಿದುಬಂದಿದೆ.

ನದಿಯ ಪಾತ್ರದುದ್ದಕ್ಕೂ ಸರಸ್ವತಿಯ ವಾಹನವಾದ ನವಿಲಿನ ವಸತಿ ಇದೆ. ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ಸರಸ್ವತಿ ನದಿಯ ಇರುವಿಕೆಯನ್ನು ಒಪ್ಪಿಕೊಂಡ ಕೇಂದ್ರ ಸರಕಾರ ಅದರ ಪುನರುಜ್ಜೀವನಕ್ಕೆ ಪ್ರಯತ್ನ ನಡೆದಿರುವದನ್ನು ಖಚಿತಪಡಿಸಿದೆ.

# ಸರಸ್ವತಿ

**ಇದು ಪರೀಕ್ಷೆಯ ಸಮಯ**

## ಹಾಕಿ ಕುರಿತು ಗೊತ್ತೆ ನಿಮಗೆ?




ಕ್ರೀಡಾಂಗಣದ ಅಳತೆ: 91ಮೀ ಉದ್ದ 55 ಮೀ ಅಗಲ. ಮಧ್ಯ ಒಂದು ಬಿಳಿ ಗೆರೆ. ಪ್ರತಿ ಅರ್ಧದಲ್ಲೂ 23 ಮೀ ದೂರದಲ್ಲಿ ಮತ್ತೊಂದು ಬಿಳಿ ಗೆರೆ ಇರುತ್ತದೆ.(ಚಿತ್ರ ನೋಡಿ). ಆಯತಾಕಾರದ ಗೋಲ್ ಪೆಟ್ಟಿಗೆಯ ಎತ್ತರ 2.14ಮೀ. ಗೋಲ್ ಕಂಬಗಳ ನಡುವಿನ ಅಂತರ 3.66 ಮೀ. ಇವಕ್ಕೆ ಸಡಿಲವಾದ ಬಲೆಯೊಂದನ್ನು ಕಟ್ಟಿರುತ್ತಾರೆ. ಅದನ್ನು ಕಾಯಲು ಸನ್ನದ್ಧನಾಗಿ ಒಬ್ಬ ಗೋಲ್‌ಕೀಪರ್ ಇರುವನು.

ಗೋಲ್ ಪೆಟ್ಟಿಗೆಯ ಸುತ್ತ ಇರುವ ಅರ್ಧವೃತ್ತವನ್ನು 'ಡಿ' ಅಥವಾ 'ಸರ್ಕಲ್' ಎನ್ನುತ್ತಾರೆ. ಚೆಂಡು ಸರ್ಕಲ್‌ನಲ್ಲಿದ್ದಾಗ ಮಾತ್ರ ಗೋಲ್ ಹೊಡೆಯಲು ಅವಕಾಶ. ಫೀಲ್ಡ್ ಗೋಲುಗಳಲ್ಲದೆ ಪೆನಾಲ್ಟಿ ಕಾರ್ನರ್ ಮತ್ತು ಪೆನಾಲ್ಟಿ ಸ್ಟ್ರೋಕ್‌ಗಳೆಂಬ ಮತ್ತೆರಡು ರೀತಿಯ ಗೋಲು ಹೊಡೆಯುವ ಅವಕಾಶಗಳಿರುತ್ತವೆ. ಅವುಗಳ ಬಗ್ಗೆ ಮಾಹಿತಿ ಕಲೆಹಾಕಿರಿ.




ಈ ಬಾರಿಯ ಹಾಕಿ ವಿಶ್ವಕಪ್ ನಮ್ಮಲ್ಲೇ ನಡೆಯಿತು. ಪಾಕಿಸ್ತಾನ ವಿರುದ್ಧದ ಮೊದಲ ಪಂದ್ಯವನ್ನು ಮಾತ್ರ ಜಯಿಸಿದ ಭಾರತ ತಂಡ ಸೆಮಿಫೈನಲ್ ತಲುಪಲಿಲ್ಲ. ಒಂದು ಕಾಲದಲ್ಲಿ ನಾವು ಹಾಕಿ ಚಾಂಪಿಯನ್ ಆಗಿದ್ದೆವು ಗೊತ್ತೆ? ಬನ್ನಿ, ನಮ್ಮ ರಾಷ್ಟ್ರೀಯ ಕ್ರೀಡೆಯ ಬಗ್ಗೆ ತಿಳಿದುಕೊಳ್ಳೋಣ.



ತಲಾ 35 ನಿಮಿಷಗಳ 2 ಅವಧಿಯಲ್ಲಿ ನಡೆಯುವ ಹಾಕಿ ಆಟದ ಪ್ರತಿ ತಂಡದಲ್ಲಿ 11 ಆಟಗಾರರಿರುತ್ತಾರೆ. ಎದುರಾಳಿಗಳಿಗೆ ಸಿಗದಂತೆ ಉಪಾಯವಾಗಿ ಚೆಂಡನ್ನು ಹಾಕಿ ಸ್ಟಿಕ್‌ನಿಂದ ದೂಡುತ್ತಾ ಅವರ ಗೋಲ್ ಪೆಟ್ಟಿಗೆಯೊಳಗೆ ನುಗ್ಗಿಸಿದರೆ ಗೋಲ್. ಹೆಚ್ಚು ಗೋಲ್ ಹೊಡೆದವರಿಗೆ ಜಯ. ಚೆಂಡನ್ನು ಮೈಕೈಗಳಿಗೆ ತಾಗಿಸಿಕೊಳ್ಳುವಂತಿಲ್ಲ. ಎದುರಾಳಿಗಳಿಗೆ ಅಡ್ಡಿ ಉಂಟುಮಾಡುವಂತಿಲ್ಲ.

## ತಿಳಿ ಬೆಳಿ

### $\pi$ಗೂ ಒಂದು ದಿನ

ನಿಮಗೆಲ್ಲ ಗಣಿತದಲ್ಲಿ ಬರುವ 'ಪೈ' ಅಥವಾ 'ಪಾಯ್' ಗೊತ್ತಿದೆ ಅಲ್ಲವೆ?

ಪೈ=ವರ್ತುಲದ ಸುತ್ತಳತೆ/ವರ್ತುಲದ ವ್ಯಾಸ=22/7

ಅಂದರೆ ಪೈ ಒಂದು ಸ್ಥಿರಾಂಕ. ಆದರೆ ಎಂದಿಗೂ ಪೂರ್ಣವಾಗಿ ಭಾಗವಾಗದ ಅಂಕಿ. ನಮ್ಮೆಲ್ಲ ಲೆಕ್ಕಗಳಲ್ಲಿ ಅದನ್ನು 3.142 ಎಂದು ತೆಗೆದುಕೊಂಡರೂ ಕೂಡಾ ಪೈಯ ನಿರ್ದಿಷ್ಟ ಮೊತ್ತವನ್ನು $10^{12}$ ಸಂಖ್ಯೆಗಳವರೆಗೆ ಗಣಿಸಲಾಗಿದೆ. 3.14159265358979323846264338327950288411716939937510....ಹೀಗೆ.

ಪೈಯ ಮೌಲ್ಯವನ್ನು ಸುಮಾರು 13 ಶತಮಾನಗಳ ಮೊದಲೇ ಭಾರತೀಯ ಗಣಿತಜ್ಞ ಆರ್ಯಭಟ ಕಂಡುಹಿಡಿದಿದ್ದ.



ಚತುರಾಧಿಕಂ ಶತಮಷ್ಟಗುಣಂ ದ್ವಾಷಷ್ಟಿಸ್ತಥಾ ಸಹಸ್ರಾಣಂ, ಆಯುತದ್ವಯ ವಿಷ್ಕಂಭಸ್ಯ ಆಸನ್ನೋ ವೃತ್ತ ಪರಿಣಾ:

(ಚಿತ್ರದಲ್ಲಿನ ಶ್ಲೋಕ ನೋಡಿ). ವರ್ಷದ 3ನೇ ತಿಂಗಳು ಅಂದರೆ ಮಾರ್ಚ್‌ನ 14ನೇ ದಿನಾಂಕವನ್ನು ಗಣಿತದ ಅತಿಮುಖ್ಯವಾದ ಪೈ ಸ್ಥಿರಾಂಕದ ದಿನವೆಂದು ಆಚರಿಸುತ್ತಾರೆ. ಏಕೆಂದರೆ ಪೈ ಬೆಲೆ 3.14.

### ಆಯವ್ಯಯ ಪತ್ರ (ಬಜೆಟ್)

ಮಕ್ಕಳೇ, ನಮ್ಮ ಮನೆಯ ಆದಾಯ ವೆಚ್ಚದಂತೆಯೇ ರಾಜ್ಯದ, ರಾಷ್ಟ್ರದ ಆದಾಯ ವೆಚ್ಚಗಳು ಕೂಡ ಇರುತ್ತವೆ. ನಮ್ಮ ದೇಶದಲ್ಲಿ ಮೂರು ಆಯವ್ಯಯಗಳು ಪ್ರಮುಖವಾಗಿ ಪ್ರಸ್ತಾಪಿಸಲ್ಪಡುತ್ತವೆ. ಕೇಂದ್ರದ ಆಯವ್ಯಯವನ್ನು ಕೇಂದ್ರದ ಹಣಕಾಸು ಸಚಿವರೂ, ರೈಲ್ವೆ ಆಯವ್ಯಯವನ್ನು ಕೇಂದ್ರ ರೈಲ್ವೆ ಮಂತ್ರಿ ಮಂಡಿಸುತ್ತಾರೆ. ರಾಜ್ಯದ ಆಯವ್ಯಯವನ್ನು ರಾಜ್ಯದ ಹಣಕಾಸು ಮಂತ್ರಿ ಮಂಡಿಸುತ್ತಾರೆ. ಇದರಲ್ಲಿ ಆದಾಯ–ವೆಚ್ಚಗಳ ವಿವರವಿರುತ್ತವೆ. ಪ್ರಮುಖ ಯೋಜನೆಗಳನ್ನು ಬಜೆಟ್‌ನಲ್ಲಿ ವಿವರಿಸಿರುತ್ತಾರೆ.

### ಹಿಮಚಂದಿರ

ಮೊನ್ನೆ ತಾನೆ ಚಂದ್ರನಲ್ಲಿ ನೀರಿದೆ ಎಂದು ಭಾರತೀಯ ವಿಜ್ಞಾನಿಗಳು ಕಂಡುಹಿಡಿದಿದ್ದರು. ಈಗ ನಮ್ಮ ಇಸ್ರೊ ಸಂಸ್ಥೆಯು ಚಂದ್ರಯಾನದಲ್ಲಿ ಅಳವಡಿಸಿರುವ ಉಪಕರಣದಿಂದ ಚಂದ್ರನ ಕಣಿವೆಗಳಲ್ಲಿ ಭಾರೀ ಪ್ರಮಾಣದ ಹಿಮಗಡ್ಡೆಗಳಿರುವುದು ಕಂಡುಬಂದಿದೆ. ಸುಮಾರು 600 ದಶಲಕ್ಷ ಟನ್ ಮಂಜುಗಡ್ಡೆ ಅಲ್ಲಿರಬಹುದು ಎನ್ನಲಾಗಿದೆ. ಇದರಿಂದ ಬಾಹ್ಯಾಕಾಶ ಪ್ರಯಾಣ, ಚಂದ್ರನಲ್ಲಿ ವಸತಿ ಮುಂತಾದ ಸಾಧ್ಯತೆಗಳು ತೆರೆದುಕೊಂಡಿವೆ.

## ಸಮಾಚಾರ

### ಸಚಿನ್ ದ್ವಿಶತಕ

ಭಾರತೀಯ ಕ್ರಿಕೆಟಿಗ ಸಚಿನ್ ತೆಂಡುಲ್ಕರ್ ಏಕ ದಿನ ಕ್ರಿಕೆಟ್‌ನಲ್ಲಿ ದ್ವಿಶತಕ (200 ರನ್) ಬಾರಿಸಿ ವಿಶ್ವ ದಾಖಲೆ ಸ್ಥಾಪಿಸಿದ್ದಾರೆ. ಈ ವಿಷಯದ ಬಗ್ಗೆ ಇನ್ನಷ್ಟು ಮಾಹಿತಿ ಸಂಗ್ರಹಿಸಿ ಕಳುಹಿಸಿ.

### ಮಹಿಳಾ ಮೀಸಲಾತಿ

ಚುನಾಯಿತ ಸದಸ್ಯರಲ್ಲಿ ಶೇ. 33 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕೆಂಬ ಮಸೂದೆಯನ್ನು ಜಾರಿಗೆ ತರಬೇಕೆಂದು ಕಳೆದ 14 ವರ್ಷಗಳಿಂದ ನಡೆಸಿದ ಪ್ರಯತ್ನ ಸಫಲವಾಗುತ್ತಿದೆ. ಭಾರತ ಸರಕಾರ ಮಹಿಳಾ ಮೀಸಲಾತಿ ವಿಧೇಯಕವನ್ನು ರಾಜ್ಯಸಭೆಯಲ್ಲಿ ಅಂಗೀಕರಿಸಿದೆ.

### ಗುಬ್ಬಚ್ಚಿಗೆ ಪ್ರಶಸ್ತಿ

ಅಭಯಸಿಂಹ ಎಂಬ ಯುವ ನಿರ್ದೇಶಕರ "ಗುಬ್ಬಚ್ಚಿಗಳು" ಮಕ್ಕಳ ಚಲನಚಿತ್ರಕ್ಕೆ ಈ ಬಾರಿ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಈ ಚಿತ್ರದಲ್ಲಿ ಪ್ರಕೃತಿ, ಪ್ರಥಮ, ಅಭಿಲಾಷ ಎಂಬ ಚಿಣ್ಣರು ನಟಿಸಿದ್ದಾರೆ. ಹಿಂದೆ ಎಲ್ಲೆಡೆ ಹಾರಾಡಿಕೊಂಡಿರುತ್ತಿದ್ದ ಗುಬ್ಬಚ್ಚಿಗಳು ಈಗ ವಿರಳವಾಗಿವೆಯಷ್ಟೆ? ಹೀಗೆ ಕಳೆದುಹೋಗುತ್ತಿರುವ ಗುಬ್ಬಚ್ಚಿಗಳನ್ನು ಹುಡುಕಹೊರಟ ಚಿಣ್ಣರು ಪಡೆವ ಅನುಭವವೇ ಈ ಚಿತ್ರದ ಕತೆ. ಪ್ರಾಣಿ, ಪಕ್ಷಿ, ಪರಿಸರಗಳನ್ನು ನಾಶ ಮಾಡಬಾರದೆಂಬ ಸಂದೇಶ ನೀಡುವ ಈ ಚಿತ್ರ ಮಕ್ಕಳಿಗೆ ಖುಷಿ ನೀಡುತ್ತದೆ. ಅಂದಹಾಗೆ ಮಾರ್ಚ್ 20ನ್ನು 'ಗುಬ್ಬಚ್ಚಿಗಳ ದಿನ'ವೆಂದು ಆಚರಿಸಲಾಗುತ್ತದೆ.



## ಬಿಸಿ ಬೇಸಿಗೆ

ಮಕ್ಕಳೇ, ಬಿರು ಬೇಸಿಗೆ ಶುರುವಾಗಿದೆ. ನಿಮ್ಮ ಆರೋಗ್ಯ ಕಾಪಾಡಿಕೊಳ್ಳಲು ಕೆಳಗಿನ ನಿಯಮಗಳನ್ನು ಅವಶ್ಯವಾಗಿ ಪಾಲಿಸಿ.



- ಬೇಸಿಗೆಯಲ್ಲಿ ದೇಹಕ್ಕೆ ನೀರಿನ ಅವಶ್ಯಕತೆ ಹೆಚ್ಚು. ಆದ್ದರಿಂದ ಆಗಾಗ ತಂಪಾದ ಪರಿಶುದ್ಧ ನೀರನ್ನು ಕುಡಿಯುತ್ತಿರಿ.
- ಸೂರ್ಯನ ಕಿರಣಗಳು ನೇರವಾಗಿ ನಿಮ್ಮ ಮೈ ಮೇಲೆ ಬೀಳದಂತೆ ಛತ್ರಿ, ಟೋಪಿ ಇಂತಹ ವಸ್ತುಗಳನ್ನು ಉಪಯೋಗಿಸಿ.
- ಬಿರು ಬಿಸಿಲಿನಲ್ಲಿ ಹೆಚ್ಚು ದೈಹಿಕ ಶ್ರಮದ ಚಟುವಟಿಕೆ ಮಾಡದಿರಿ.
- ಬಯಲಲ್ಲಿ ಆಡುವ ಆಟಗಳನ್ನು ಮುಂಜಾವು ಅಥವಾ ಸಂಜೆಗಳಲ್ಲಿ ಆಡುವುದು ಬೇಸಿಗೆಯಲ್ಲಿ ಹಿತಕರ.

ಈ ಸಂಚಿಕೆ ಓದಿ ನಿಮಗೆ ಏನೆನ್ನಿಸಿತು? ಯಾವುದು ಇಷ್ಟವಾಯಿತು, ಯಾವುದು ಇಷ್ಟವಾಗಲಿಲ್ಲ? ಪತ್ರ ಬರೆದು ನಮಗೆ ತಿಳಿಸಿ. ವಿಳಾಸ ಇಲ್ಲಿದೆ.

ಅದಮ್ಯ ಚೇತನ
'ಅನ್ನಪೂರ್ಣ'
ಮಹಾನಗರಪಾಲಿಕೆ ಸಮುದಾಯ ಭವನ
ಗವಿಪುರ, ಬೆಂಗಳೂರು –19

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ
ಅದಮ್ಯ ಚೇತನ ಬೆಂಗಳೂರು
ಚಿಣ್ಣರ ಚೇತನ–ಶಾಲಾ ಮಕ್ಕಳ ಗೋಡೆ ಪತ್ರಿಕೆ. ಕರ್ನಾಟಕ ಸರ್ಕಾರ, ಸರ್ವಶಿಕ್ಷಣ ಅಭಿಯಾನ ಮತ್ತು ಅದಮ್ಯ ಚೇತನ ಸಂಸ್ಥೆ– ಇವರ ಸಹಭಾಗಿತ್ವದಲ್ಲಿ ಪ್ರಕಾಶಿಸಿದೆ.
© ಹಕ್ಕುಗಳನ್ನು ಕಾದಿರಿಸಲಾಗಿದೆ

ಸರ್ವ ಶಿಕ್ಷಣ ಅಭಿಯಾನ ಮಿಷನ್
ಬೆಂಗಳೂರು



## ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು

### ಸ್ವಿಚ್ಚಿನ ಪ್ರಶ್ನೆ

ಮೂರು ಬಲ್ಬುಗಳ ಮೂರು ಸ್ವಿಚ್ಚುಗಳು ಯಾವುವೆಂದು ಕಂಡುಹಿಡಿಯಬೇಕಲ್ಲವೆ? ಹೀಗೆ ಮಾಡಿ. ಮೂರು ಸ್ವಿಚ್ಚುಗಳಲ್ಲಿ ಮೊದಲನೆಯದನ್ನು ಒತ್ತಿರಿ. ಎರಡು ನಿಮಿಷದ ನಂತರ ಅದನ್ನು ಆರಿಸಿ ಎರಡನೆಯದನ್ನು ಹೊತ್ತಿಸಿ. ಈಗ ಮೇಲೆ ಇರುವ ಕೋಣೆಗೆ ಹೋಗಿ ಬಲ್ಬುಗಳನ್ನು ನೋಡಿರಿ. ಯಾವುದು ಉರಿಯುತ್ತಿರುತ್ತದೋ ಅದಂತೂ ಎರಡನೇ ಸ್ವಿಚ್ಚಿಗೆ ಸಂಬಂಧಿಸಿದ್ದು. ಉರಿಯದ ಇರುವ ಎರಡರ ಬಳಿ ಹೋಗಿ ಕೈಯಿಂದ ಮುಟ್ಟಿ ನೋಡಿ. ಎರಡು ನಿಮಿಷ ಉರಿದ ಬಲ್ಬು ಬಿಸಿಯಾಗಿರುತ್ತದೆ. ಅಂದರೆ ಅದು ಮೊದಲ ಸ್ವಿಚ್ಚಿಗೆ ಸಂಬಂಧಿಸಿದ್ದು ಅಂತಾಯಿತು. ಉಳಿದದ್ದು ಮೂರನೇ ಸ್ವಿಚ್ಚಿನದು.

### ಯಾಕೆ ಹಾಗೆ ಮಾಡ್ತಾನಂದ್ರೆ...

ಹತ್ತನೇ ಅಂತಸ್ತಿಗೆ ಹೋಗಬೇಕಾಗಿದ್ದ ಮನುಷ್ಯ ಏಳನೇ ಅಂತಸ್ತಿಗೆ ಮಾತ್ರ ಲಿಫ್ಟಿನಲ್ಲಿ ಹೋಗಿ ಅಲ್ಲಿಂದ ಮೂರು ಅಂತಸ್ತು ಮೆಟ್ಟಿಲೇರಿ ಯಾಕೆ ಹೋಗುತ್ತಾನೆ? ಯಾಕೆಂದರೆ ಆತ ಕುಳ್ಳ. ಲಿಫ್ಟಿನಲ್ಲಿ ಒಬ್ಬನೇ ಇದ್ದಾಗ ಹತ್ತನೇ ಅಂತಸ್ತಿನ ಗುಂಡಿ ಅವನಿಗೆ ನಿಲುಕುವುದಿಲ್ಲ. ಅದಕ್ಕೆ! ಮಳೆಗಾಲದಲ್ಲಿ ಹೇಗೆ ನೇರ ಹತ್ತನೇ ಅಂತಸ್ತು ತಲುಪುತ್ತಾನೆ? ಯಾಕೆಂದರೆ ಆಗ ಅವನ ಬಳಿ ಕೊಡೆ ಇರುತ್ತದಲ್ಲ, ಅದನ್ನು ಬಳಸಿ ಎತ್ತರದಲ್ಲಿರುವ ಹತ್ತನೇ ಅಂತಸ್ತಿನ ಗುಂಡಿಯನ್ನು ಒತ್ತುತ್ತಾನೆ. ಅಷ್ಟೇ.

### ಮಾಯಾಬುಟ್ಟಿ

ಸೆಕೆಂಡಿಗೆ ಹೂಗಳ ಸಂಖ್ಯೆಯನ್ನು ದ್ವಿಗುಣಗೊಳಿಸಬಲ್ಲ ಮಾಯಾಬುಟ್ಟಿಯಲ್ಲಿ 1 ನಿಮಿಷ ಅಂದರೆ 60 ಸೆಕೆಂಡಿನಲ್ಲಿ ಪೂರಾ ತುಂಬುವಷ್ಟು ಹೂಗಳಿವೆ. ಅಂದರೆ ಒಂದು ಸೆಕೆಂಡ್ ಹಿಂದೆ ಅದರಲ್ಲಿ ಅರ್ಧ ಬುಟ್ಟಿ ಹೂಗಳಿದ್ದಿರಬೇಕಲ್ಲವೆ? ಉತ್ತರ 59 ಸೆಕೆಂಡು.